ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 01.03.2025.

**ಪಾಟೀ ಸವಾಲುಃ** 1 ರಿಂದ 3 ಹಾಗೂ 11ನೇ ಪ್ರತಿವಾದಿಗಳ ಪರ ಶ್ರೀ ಎಂ.ಜೆ.ಪಿ. ವಕೀಲರಿಂದಃ

ನಾನು ಬೊಮ್ಮನಹಳ್ಳಿಯ ಖಾಯಂ ನಿವಾಸಿ, ಆದರೆ ನನ್ನ ಜಮಿನಿನ ಸರ್ವೆ ನಂಬರ ನಿಂಬರ್ಗಾ ಸೀಮೆಯಲ್ಲಿ ಬರುತ್ತದೆ. ನಾನು ಬಿಎ ಪದವಿದರ ಇರುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ನಿಂಬರ್ಗಾ ವಾಸಿ ಎಂದು ಬರೆದಿರುತ್ತೇನೆ ಎಂದರೆ ಸರಿ, ಆದರೆ ಬೊಮ್ಮನಹಳ್ಳಿ ಗ್ರಾಮದಲ್ಲಿ ಇರುತ್ತೇನೆ. ನನಗೆ ಬಸಪ್ಪ ಅಷ್ಟಗಿ ರವರ ಪರಿಚಯ ಇರುವುದಿಲ್ಲ. ಸದರಿ ಬಸಪ್ಪ ಅಷ್ಟಗಿ ರವರಿಗೆ ಎಷ್ಟು ಜನ ಮಕ್ಕಳು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ, ಏಕೆಂದರೆ ನಾನು ಬೊಮ್ಮನಹಳ್ಳಿ ಗ್ರಾಮದಲ್ಲಿ ಇರುತ್ತೇನ. ಅದೇ ರೀತಿ ನನಗೆ ಚಂದಪ್ಪ, ರಾಣಪ್ಪ, ಧರ್ಮಣ್ಣ, ಸಂಗಪ್ಪ ರವರು ಪರಿಚಯ ಇರುವುದಿಲ್ಲ. ಅದೇ ರೀತಿ ಮೇಲೆ ಹೇಳಿದ ನಾಲ್ಕು ಜನರ ಮಕ್ಕಳು ಯಾರು-ಯಾರು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಜಮೀನಿನ ಸರ್ವೆ ನಂ.266 ಇರುತ್ತದೆ. ನನ್ನ ಮುಖ್ಯ ವಿಚಾರಣೆಯಲ್ಲಿ ಜಮೀನಿನ ಸರ್ವೆ ನಂಬರ ಬರೆದಿರುವುದಿಲ್ಲ. ಸರ್ವೆ ನಂ.272ರ ಪಹಣಿ ಯಾರು ಹೆಸರಿನಲ್ಲಿ ಇದೆ ಎಂದು ನಾನು ನೋಡಿಲ್ಲ.  ಅದೇ ರೀತಿ ಸರ್ವೆ ನಂ.272ರಲ್ಲಿ ಎಷ್ಟು ಹಿಸ್ಸಾ ಇರುತ್ತವೆ ಎಂದು ನನಗೆ ಮಾಹಿತಿ ಇರುವುದಿಲ್ಲ.

ಸರ್ವೆ ನಂ.272ರ ಜಮೀನು ಒಟ್ಟು 13 ಎಕರೆ ಚಿಲ್ಲರೆ ಗುಂಟೆ ಇರುತ್ತದೆ, ಅದು ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಮಾಹಿತಿ ಇಲ್ಲ. ಮಲಕಪ್ಪ ತಂದೆ ರಾಣಪ್ಪ ರವರ ಹೆಸರಿನಲ್ಲಿ ಸರ್ವೆ ನಂ.272ರ ಜಮೀನು ಎಷ್ಟು ಎಕರೆ ಇದೆ ಎಂದು ನನಗೆ ಗೊತ್ತಿಲ್ಲ ಹಾಗೂ ಅವರ ಪರಿಚಯ ನನಗೆ ಇರುವುದಿಲ್ಲ. ಅದೇ ರಿತೀ ಸರ್ವೆ ನಂ.272/2ರ 5 ಎಕರೆ ಜಮೀನು ಯಾರ ಹೆಸರಿನಲ್ಲಿ ಇದೆ ಎಂದು ನಾನು ಪಹಣಿ ನೋಡಿಲ್ಲ. ಅದೇ ರೀತಿ 1ನೇ ವಾದಿಯ ಹೆಸರಿನಲ್ಲಿ ಎಷ್ಟು ಎಕರೆ ಪಹಣಿ ಇದೆ ಎಂದು ನಾನು ನೋಡಿಲ್ಲ. 1ನೇ ಪ್ರತಿವಾದಿ ನನಗೆ ಪರಿಚಯ ಇರುತ್ತಾರೆ. ನಿಪಿ-1ರ ದಾಖಲೆ 1ನೇ ಪ್ರತಿವಾದಿ

ಹೆಸರಿನಲ್ಲಿ ಇದೆ ಎಂದರೆ ಸರಿ. ನಿಪಿ-1ರ ಜಮೀನು 1ನೇ ಪ್ರತಿವಾದಿ ಹೆಸರಿನಲ್ಲಿ ಇದ್ದು, ಅವರೇ ಸಾಗುವಳಿ ಮಾಡುತ್ತಿದ್ದಾರೆ ಎಂದರೆ, ಸಾಕ್ಷಿ ಹೆಚ್ಚಾಗಿ ವಾದಿಯರು ಸದರಿ ಜಮೀನಿನಲ್ಲಿ ವ್ಯವಸಾಯ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ಸದರಿ ನಿಪಿ-1ರ ಜಮೀನಿನಲ್ಲಿ ವಾದಿಯರು ಯಾವ ದಿಕ್ಕಿನ ಕಡೆ ವ್ಯವಸಾಯ ಮಾಡುತ್ತಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲ.

ವಾದಿಯರು ನನಗೆ ಖಾಸಾ ಇರುವ ಕಾರಣ 1 ರಿಂದ 3ನೇ ಪ್ರತಿವಾದಿಯರು ಸದರಿ ಜಮೀನಿನ ಕಬ್ಜಯಲ್ಲಿ ಇದ್ದರೂ ಕುಡಾ, ವಾದಿಯರ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯರು ದಾವಾ ಸ್ವತ್ತುನ್ನು ಸಾಗುವಳಿ ಮಾಡುತ್ತಿದ್ದ ಬಗ್ಗೆ ನಾನು ಯಾವುದೇ ದಾಖಲೆ ನೋಡಿಲ್ಲ. ನಾನು ನಿಂಬರ್ಗಾ ಗ್ರಾಮದ ವಾಸಿ ಅಲ್ಲ, ಬೊಮ್ಮನಹಳ್ಳಿ ಇರುವುದರಿಂದ ಯಾರು ಸಾಗುವಳಿ ಮಾಡುತ್ತಿದ್ದಾರೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿ. ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು. ದಿನಾಂಕಃ 01.03.2025.

**ಪಾಟೀ ಸವಾಲುಃ** 1 ರಿಂದ 3 ಹಾಗೂ 11ನೇ ಪ್ರತಿವಾದಿಗಳ ಪರ ಶ್ರೀ ಎಂ.ಜೆ.ಪಿ. ವಕೀಲರಿಂದಃ

ನಾನು ಶಾಲೆ ಕಲಿತಿಲ್ಲ, ನನಗೆ ಓದಲು ಬರೆಯಲು ಬರುವುದಿಲ್ಲ. ನಾನು ಬೊಮ್ಮನಹಳ್ಳಿ ವಾಸಿ ಎಂದರೆ ಸರಿ. ನನಗೆ ಬಸಪ್ಪ ಅಷ್ಟಗಿ ರವರ ಪರಿಚಯ ಇರುತ್ತದೆ. ಬಸಪ್ಪನಿಗೆ ಎಷ್ಟು ಜನ ಮಕ್ಕಳು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನಗೆ ಚಂದಪ್ಪ ರವರು ಪರಿಚಯ ಇರುವುದಿಲ್ಲ. ಅದೇ ರೀತಿ ನನಗೆ ರಾಣಪ್ಪ, ಧರ್ಮಣ್ಣ, ಸಂಗಪ್ಪ ರವರು ಪರಿಚಯ ಇರುವುದಿಲ್ಲ. ಸದರಿ ಮೇಲೆ ಹೇಳಿದ ನಾಲ್ಕು ಜನ ಯಾರ-ಯಾರ ಮಕ್ಕಳು ಇರುತ್ತಾರೆ ಎಂದು ನನಗೆ ಗೊತ್ತಿಲ್ಲ. ಸರ್ವೆ ನಂ.272ರ ಪಹಣಿಯನ್ನು ನಾನು ನೋಡಿರುವುದಿಲ್ಲ. ಸರ್ವೆ ನಂ.272ರ ಮಾಲಿಕರು ಯಾರು ಇರುತ್ತಾರೆ ಎಂದು ನನಗೆ ಮಾಹಿತಿ ಇಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ 1985ರಲ್ಲಿ ಮೂರು ಭಾಗ ಆಗಿದೆ ಎಂದು ಹೇಳಿದ್ದು, ಯಾರ-ಯಾರ ಭಾಗ ಎಷ್ಟು-ಎಷ್ಟು ಹೋಗಿದೆ ಎಂದು ನನಗೆ ಗೊತ್ತಿಲ್ಲ.

ಸರ್ವೆ ನಂ.272/2ರಲ್ಲಿ ಅಂದರ ನಿಪಿ-1ರಲ್ಲಿ ಹನಮಂತ ತಂದೆ ಸಂಗಣ್ಣ ರವರ ಹೆಸರು ದಾಖಲಾಗಿದ್ದು ಅವರೇ ಮಾಲಿಕರು ಇರುತ್ತಾರೆ ಎಂದರೆ ಸರಿ. ಸದರಿ ನಿಪಿ-1ರ ಭೂಮಿಯನ್ನು ಹನಮಂತ ತಂದೆ ಸಂಗಣ್ಣ ರವರು ಸಾಗವಳಿ ಮಾಡುತ್ತಿದ್ದಾರೆ ಎಂದರೆ ಸರಿ. ನನ್ನ ಮುಖ್ಯ ವಿಚಾರಣೆಯಲ್ಲಿ ಏನು ಬರೆಯಲಾಗಿದೆ ಎಂದರೆ ನನಗೆ ಮಾಹಿತಿ ಇಲ್ಲ ಎಂದರೆ ಸರಿ. ನಾನು 1 ಮತ್ತು 2ನೇ ವಾದಿಯರ ಕೋರಿಕೆಯ ಮೇರೆಗೆ ಸಾಕ್ಷಿ ನುಡಿಯಲು ಬಂದಿರುತ್ತೇನೆ ಎಂದರೆ ಸರಿ. ನನಗೆ ದಾವಾ ಸ್ವತ್ತಿನ ಜಮೀನಿನ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿ.

**ಮರು ವಿಚಾರಣೆಃ** ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)
ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು,**
**ಆಳಂದ.**